# ಕೊರೋನಾ ವಾರಿಯರ್ಸ್‌ಗೆ ವಿವಿಧ ಸಲಕರಣೆ ವಿತರಣೆ



ಮೂಡಲಗಿ : ಕಳೆದ ಆರು ತಿಂಗಳಿನಿಂದ ಹೆಮ್ಮಾರಿಯಂತೆ ಕಾಡುತ್ತಿರುವ ಕೊರೋನಾ ವೈರಸ್‌ನಿಂದಾಗಿ ಜನರ ಕಷ್ಟ-ಕಾರ್ಪಣ್ಯಗಳನ್ನು ಮನಗಂಡು ಅವರಿಗೆ ಆಸರೆಯಾಗಿ ಆಪದ್ಬಾಂಧವರಾಗಿರುವ ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಅವರ ಹೃದಯ ವೈಶಾಲ್ಯ ಇಡೀ ನಾಡಿಗೆ ಮಾದರಿಯಾಗಿದೆ ಎಂದು ಹಿರಿಯ ತಜ್ಞ ವೈದ್ಯ ಡಾ.ಆರ್.ಎಸ್. ಬೆಣಚಿನಮರಡಿ ಶ್ಲಾಘಿಸಿದರು.

ಇಲ್ಲಿಯ ಶಿವಬೋಧರಂಗ ಅರ್ಬನ್ ಸೊಸಾಯಿಟಿಯಲ್ಲಿ ಶನಿವಾರದಂದು ಕೊರೋನಾ ವಾರಿಯರ್ಸ್‌ಗೆ ಸಚಿವ ರಮೇಶ ಜಾರಕಿಹೊಳಿ ಮತ್ತು ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ಸಾರ್ವಜನಿಕರ ಸುರಕ್ಷತೆಗಾಗಿ ಕೊಡಮಾಡಿರುವ ಮಾಸ್ಕ್ ಮತ್ತು ಇತರೇ ಮೆಡಿಕಲ್ ಸಾಮಗ್ರಿಗಳನ್ನು ವಿತರಿಸಿ ಅವರು ಮಾತನಾಡಿದರು.

ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಧಾರ್ಮಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಸಚಿವ ರಮೇಶ ಜಾರಕಿಹೊಳಿ ಮತ್ತು ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಅವರು ವಿಶಿಷ್ಟ ಸೇವೆಗೈಯ್ಯುವ ಮೂಲಕ ಜನರ ಹೃದಯದಲ್ಲಿ ಭದ್ರವಾಗಿ ನೆಲೆಯೂರಿದ್ದಾರೆ. ಸಾಮಾಜಿಕ ಕಳಕಳಿಯನ್ನು ಹೊಂದಿ ಮೊದಲಿನಿಂದಲೂ ಜನರ ನೋವುಗಳಿಗೆ ಸ್ಪಂದಿಸುತ್ತ ಅಪ್ರತಿಮ ಸಮಾಜ ಸೇವಾ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಜನರ ಪ್ರೀತಿ, ವಿಶ್ವಾಸ ಗಳಿಸಿದ್ದಾರೆ ಎಂದು ಹೇಳಿದರು. ಕೊರೋನಾದಂತಹ ಕ್ಲಿಷ್ಟಕರ ಸಂದರ್ಭದಲ್ಲಿ ಜನರ ಸುರಕ್ಷತೆಗಾಗಿ ಮತ್ತೊಮ್ಮೆ ಪ್ರತಿ ಮನೆ-ಮನೆಗೆ ಎರಡನೇ ಬಾರಿಗೆ ಮಾಸ್ಕ್‌ಗಳನ್ನು ವಿತರಿಸುತ್ತಿದ್ದಾರೆ. ಕೊರೋನಾ ಆರಂಭಿಕ ದಿನಗಳಲ್ಲಿ ಕ್ಷೇತ್ರದ ಎಲ್ಲ ಜನರಿಗೆ 2.50 ಲಕ್ಷ ಮಾಸ್ಕ್‌ಗಳು ಮತ್ತು 86 ಸಾವಿರ ಕುಟುಂಬಗಳಿಗೆ ಆಹಾರ ಧಾನ್ಯಗಳ ಕಿಟ್‌ಗಳನ್ನು ನೀಡುವ ಮೂಲಕ ರಾಜ್ಯ, ರಾಷ್ಟ್ರದಲ್ಲಿಯೇ ಮೊದಲಿಗರೆನಿಸಿಕೊಂಡಿರುವ ಇವರುಗಳ ಸಾಮಾಜಿಕ ಕಳಕಳಿ ಪ್ರತಿಯೊಬ್ಬರಿಗೂ ಮಾದರಿಯಾಗಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ತಹಶೀಲ್ದಾರ ಡಿ.ಜೆ. ಮಹಾತ್, ಬಿಇಓ ಅಜೀತ ಮನ್ನಿಕೇರಿ, ಸಿಪಿಐ ವೆಂಕಟೇಶ ಮುರನಾಳ ಮಾತನಾಡಿ, ಬೆನ್ನಿಗಿರುವ ಸಹೋದರರಿಗಿಂತ ಹೆಚ್ಚಾಗಿ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ಕೊರೋನಾ ಸೋಂಕಿತರ ಆರೈಕೆಗಾಗಿ ಕಾಳಜಿ ತೋರುತ್ತಿರುವುದು ಜನರಿಗಿರುವ ಅವರ ಕಳಕಳಿ ಮನೋಭಾವನೆ ಎತ್ತಿ ತೋರಿಸುತ್ತದೆ. ಸೋಂಕಿತರೆಂದರೆ ಭಯಪಡುವ ಇಂದಿನ ದಿನಗಳಲ್ಲಿ ಅವರಿಗಾಗಿಯೇ ಕಿಟ್‌ಗಳನ್ನು ತಯಾರಿಸಿದ್ದಾರೆ. ಇದರಲ್ಲಿ ಸೋಂಕಿತರಿಗೆ ದಿನನಿತ್ಯ ಉಪಯೋಗಿಸುವ ಎಲ್ಲ ವಸ್ತುಗಳು ಅದರಲ್ಲಿವೆ. ಗುಣಮಟ್ಟದ ಊಟೋಪಚಾರ, ಆಕ್ಸಿಜನ್ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ ಹಣ್ಣು ಹಂಪಲಗಳನ್ನು ಸಹ ಸೋಂಕಿತರಿಗೆ ದಿನನಿತ್ಯ ಪೂರೈಸುತ್ತಿದ್ದಾರೆ. ಇವರಂತಹ ಶಾಸಕರನ್ನು ಪಡೆದಿರುವುದು ನಿಮ್ಮೆಲ್ಲರ ಸುದೈವ ಎಂದು ಅವರು ಪ್ರಶಂಸಿಸಿದರು.

ಶಾಸಕ ಬಾಲಚಂದ್ರ ಜಾರಕಿಹೊಳಿ ಅವರ ಆಪ್ತ ಸಹಾಯಕ ನಾಗಪ್ಪ ಶೇಖರಗೋಳ ಮಾತನಾಡಿ, ಕೊರೋನಾ ವಿರುದ್ಧ ಹೋರಾಡಲು ನಾವೆಲ್ಲ ಸನ್ನದ್ಧರಾಗಬೇಕಿದೆ. ದಿನೇ ದಿನೇ ಹೆಚ್ಚುತ್ತಿರುವ ಕೊರೋನಾ ವೈರಸ್ ನಿರ್ಮೂಲನೆಗಾಗಿ ಪಣ ತೊಡಬೇಕಿದೆ. ಮಾಸ್ಕ್‌ಗಳನ್ನು ಕಡ್ಡಾಯವಾಗಿ ಹಾಕಿಕೊಳ್ಳಬೇಕು. ಜೊತೆಗೆ ಸಾಮಾಜಿಕ ಅಂತರ ಕಾಯ್ದುಕೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪರಿಷ್ಕೃತ ಮಾರ್ಗಸೂಚಿಗಳನ್ನು ಪಾಲಿಸಬೇಕಿದೆ ಎಂದು ಹೇಳಿದರು.

ಶಾಸಕರ ಆಪ್ತ ಸಹಾಯಕರಾದ ದಾಸಪ್ಪ ನಾಯಿಕ, ನಿಂಗಪ್ಪ ಕುರಬೇಟ, ಪಿಎಸ್‌ಐ ಮಲ್ಲಿಕಾರ್ಜುನ ಸಿಂಧೂರ, ಮುಖಂಡ ರವೀಂದ್ರ ಸೋನವಾಲ್ಕರ, ಅರಭಾವಿ ಮಂಡಲ ಬಿಜೆಪಿ ಅಧ್ಯಕ್ಷ ಮಹಾದೇವ ಶೆಕ್ಕಿ, ಡಾ.ಎಸ್.ಎಸ್. ಪಾಟೀಲ, ಸುಭಾಸ ಸಣ್ಣಕ್ಕಿ, ಹುಸೇನಸಾಬ ಶೇಖ, ಮರೆಪ್ಪ ಮರೆಪ್ಪಗೋಳ, ಅನ್ವರ ನದಾಫ, ಹಣಮಂತ ಗುಡ್ಲಮನಿ, ಗಿರೀಶ ಢವಳೇಶ್ವರ, ತಿಪ್ಪಣ್ಣಾ ಕುರುಬಗಟ್ಟಿ, ಮಲಿಕಸಾಬ ಹುಣಶ್ಯಾಳ, ಪ್ರಶಾಂತ ನಿಡಗುಂದಿ, ಶ್ರೀಶೈಲ ಬಳಿಗಾರ, ಆನಂದ ಟಪಾಲ, ಸಿದ್ದು ಹಳ್ಳೂರ, ಬಸು ಝುಂಡೇಕುರುಬರ, ಮಹಾದೇವ ಮುಕ್ಕುಂದ, ಮಹಾದೇವ ರಂಗಾಪೂರ, ಪುರಸಭೆಯ ಚಿದಾನಂದ ಮುಗಳಖೋಡ, ಪುರಸಭೆ ಸದಸ್ಯರು, ಬಿಜೆಪಿ ವಿವಿಧ ಮೋರ್ಚಾಗಳ ಪದಾಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಆಶಾ, ಅಂಗನವಾಡಿ ಕಾರ್ಯಕರ್ತೆಯರು, ಪುರಸಭೆಯ ಸಿಬ್ಬಂದಿಗಳಿಗೆ ಪೇಸ್ ಸೀಲ್ಡ್, ಎನ್95 ಮಾಸ್ಕ್, ಸ್ಯಾನಿಟೈಜರ್‌ಗಳನ್ನು ವಿತರಿಸಲಾಯಿತು.

# ಆಮ್ವೇ : ಹೋಮ್ ಡೆಲಿವರಿ ಹೆಚ್ಚಳ ಗುರಿ

ಹುಬ್ಬಳ್ಳಿ : ದೇಶದ ಮುಂಚೂಣಿ ಎಫ್‌ಎಂಸಿಜಿ ನೇರ ಮಾರಾಟ ಸಂಸ್ಥೆಗಳಲ್ಲಿ ಒಂದಾಗಿರುವ ಅಮ್ವೆ ಈಗ ಹೆಚ್ಚಿಸುವ ಕಡೆಗೆ ಗಮನ ಹರಿಸುತ್ತಿದೆ , ಆಮ್ವೆ 10 - ವರ್ಷದ ಬೆಳವಣಿಗೆ ಭಾಗವಾಗಿ ಈ ವರ್ಷದ ಆರಂಭದಲ್ಲಿ ಆನ್ಲೈನ್ ನಿಂದ ಆನ್ಲೈನ್ನು ಒಂದುಗೂಡಿಸಲು ಪ್ರಾರಂಭಿಸಿದೆ . ಸಂಸ್ಥೆಯು ಆನ್ಲೈನ್ ಮಾರಾಟದಲ್ಲಿ ಗಮನಾರ್ಹ ಬೆಳವಣಿಗೆ ಕಂಡಿದ್ದು ಫೆಬ್ರವರಿ 2020 ರಲ್ಲಿ ಇದ್ದ ಶೇ. 33.6 ಈಗ ಶೇ.70 ಕ್ಕಿಂತ ಹೆಚ್ಚಿನ ಬೆಳವಣಿಗೆ ಹೊಂದಿದೆ . ಈ ವರ್ಷದ ಅಂತ್ಯದವರೆಗೆ ಆನ್ಲೈನ್ ಆರ್ಡರ್ ಗಳು ತಿಂಗಳಿಗೆ 5-6ಲಕ್ಷಕ್ಕೂ ಹೆಚ್ಚು ತಲುಪುವ ನಿರೀಕ್ಷೆಯಿದೆ.ಆಮ್ವೆ ಬಲವಾದ ಪೂರೈಕೆದಾರ ಸರಪಳಿ ಮತ್ತು ಹೋಮ್ ಡೆಲಿವರಿ ಕಾರ್ಯತಂತ್ರದ ಕಡೆಗೆ ಕಾರ್ಯನಿರ್ವಹಿಸುತ್ತದೆ . 2020 ರ ಅಂತ್ಯದವರೆಗೆ ಕೆಲವು ಮಂಚೂಣಿ ರಾಷ್ಟ್ರೀಯ ಲಾಜಿಸ್ಟಿಕ್ ಪಾಲುದಾರರನ್ನು ಸೇರಿಸುವ ಮೂಲಕ ಈ ಜಾಲವನ್ನು ಬಲಿಷ್ಠಗೊಳಿಸುವುದಕ್ಕಾಗಿ 18 ಸ್ಥಳೀಯ ಮತ್ತು ರಾಷ್ಟ್ರೀಯ ಡೆಲಿವರಿ ಪಾಲುದಾರರು ಮತ್ತು ಯೋಜನೆಗಳ ಸಂಯೋಜನೆಯೊಂದಿಗೆ ಕಾರ್ಯನಿರ್ವಹಿಸುತ್ತದೆ . ಸಂಸ್ಥೆ ಸದ್ಯ 8,000 ಅಂಚೆ ಕೋಡ್ ಗಳಲ್ಲಿ ಸೇವೆ ಒದಗಿಸುತ್ತಿದ್ದು ತನ್ನ ಜಾಲದಲ್ಲಿ ಹೆಚ್ಚುವರಿ ರಾಷ್ಟ್ರೀಯ ಲಾಜಿಸ್ಟಿಕ್ ಸೇವೆಗಳನ್ನು ಸೇರಿಸುವ ಮೂಲಕ 15 ಸಾವಿರ ಅಂಚೆ ಕೋಡ್ ಗಳಿಗೆ ತಲುಪುವ ಉದ್ದೇಶ ಹೊಂದಿದೆ. ಜೊತೆಗೆ ಆಮ್ವೆ ಆನ್ಲೈನ್ ಬೇಡಿಕೆ ಪೂರೈಸಲು ಭಾರತದಾದ್ಯಂತ ಶೇ.40 ಹೆಚ್ಚುವರಿ ತೃತೀಯ ಮಾನವಶಕ್ತಿ ಸೇರಿಸಲು ನೋಡುತ್ತಿದೆ , ಆಮ್ವೆ ಕಾರ್ಯಾಚರಣೆಯ ಪ್ರತಿಯೊಂದು ಹಂತದಲ್ಲಿಯೂ ಡಿಜಿಟಲ್ ಪರಿವರ್ತನೆ ಮುಂದುವರೆಸಲು ದಾರಿ ಮಾಡಿಕೊಟ್ಟಿದೆ . ಇತ್ತೀಚಿನ ಬಹು ಡಿಜಿಟಲ್ ಮತ್ತು ಸಾಮಾಜಿಕ ಸಾಧನಗಳ ಸ್ಥಾಪನೆಯೊಂದಿಗೆ ಆಮ್ವೆ ನೇರ ಮಾರಾಟಗಾರರು ತಮ್ಮ ಉತ್ಪನ್ನಗಳನ್ನು 10 ಪಟ್ಟು ಸುಲಭವಾಗಿ ಆನ್ಲೈನ್ನಲ್ಲಿ ಮಾರಾಟ ಮಾಡುವುದು ಅಥವಾ ಖರೀದಿಸುವುದು ಮತ್ತು ಅವರ ವ್ಯಾಪಾರವನ್ನು ಸ್ಥಾಪಿಸುವುದನ್ನು ಅಷ್ಟೇ ಗುರಿಯಾಗಿಸಿದೆ.

ಆಮ್ವೆ ಹೋಮ್ ಡೆಲಿವರಿ ಕಾರ್ಯತಂತ್ರದ ಕುರಿತು ಮಾತನಾಡಿದ ಅಮ್ವೆ ಇಂಡಿಯಾದ ಸಿಇಓ ಅನ್ಶು ಬುಧ್ರಾಜಾ , ಅವರು ಹೋಮ್ ಡೆಲಿವರಿ ಅನುಭವವನ್ನು ಇನ್ನಷ್ಟು ಉತ್ತಮಗೊಳಿಸಲು 30 ಕೋಟಿ ರೂ . , ಹೂಡಿಕೆ ಮಾಡುತ್ತಿದ್ದೇವೆ ಎಂದರು . ಆನ್ಲೈನ್ ಆರ್ಡ?? ಗಳು ಮತ್ತು ಅದರ ಪ್ರಾಮುಖ್ಯತೆ ಕುರಿತು ಮಾತನಾಡಿದ ಆಮ್ವೆ ಇಂಡಿಯಾದ ಗೋಬಲ್ ಓಮ್ನಿ ಚಾನೆಲ್ ಲಾಜಿಸ್ಟಿಕ್ಸ ಉಪಾಧ್ಯಕ್ಷ ಸಂಜೀವ್ ಸೂರಿ , ಅವರು ಖರೀದಿಯ ನಂತರದ ಅನುಭವವ ಹೆಚ್ಚಿಸಲು ಮುಂದಿನ ವರ್ಷದ ಆರಂಭದ ಮೊದಲ ತ್ರೈಮಾಸಿಕದಲ್ಲಿ ಒಂದೇ ದಿನದಲ್ಲಿ ಡೆಲಿವರಿ ಮತ್ತು ಆನ್ಲೈನ್ ರಿಟರ್ನ್ ಸೇವೆಗಳನ್ನು ಪ್ರಾರಂಭಿಸಲು ನಾವು ಯೋಜಿಸುತ್ತಿದ್ದೇವೆ ಎಂದರು .

# ಮಾನಸಿಕ ಒತ್ತಡದಿಂದ ಕಾಯಿಲೆ :ಪಾಂಡುರಂಗಿ



ಧಾರವಾಡ: ಯುವ ಸಮುದಾಯದಲ್ಲಿ ತಾತ್ಕಾಲಿಕ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸೂಚಿಸುವುದನ್ನು ಪಾಲಕರು, ಶಿಕ್ಷಕರು ಮತ್ತು ಸಮಾಜದ ಸಂಘ-ಸಂಸ್ಥೆಗಳು ವಯಸ್ಸಿನ ಅನುಗುಣವಾಗಿ ಮಾಡದಿರುವುದೇ ಆತ್ಮಹತ್ಯೆ ಪ್ರಕರಣಗಳು ಹೆಚ್ಚಲು ಕಾರಣ ಎಂದು ಡಾ. ಆನಂದ ಪಾಂಡುರಂಗಿ ಹೇಳಿದರು.

ವಿಶ್ವ ಆತ್ಮಹತ್ಯೆ ನಿಯಂತ್ರಣಾ ದಿನ ನಿಮಿತ್ತ ಇಲ್ಲಿನ ಮಾಳಮಡ್ಡಿ ಶ್ರೀ ವನವಾಸಿ ರಾಮಂದಿರದ ವೆಂಕಟದಾಸ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಯುವ ಮನಸ್ಸುಗಳ ನಿಯಂತ್ರಣ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಮಾನಸಿಕ ಅನಾರೋಗ್ಯ ಪ್ರಸ್ತುತದಲ್ಲಿ ಹೆಚ್ಚಿದೆ. ಈ ಸಮಸ್ಯೆ ನಿವಾರಿಸಲು ಮನಸ್ಸಿನ ಶಾಂತಿ, ನೆಮ್ಮದಿಗೆ ಮಹತ್ವ ನೀಡಲಾಗುತ್ತದೆ. ಮಾನಸಿಕ ಒತ್ತಡ ಮತ್ತು ಆತಂಕ ಅನೇಕ ಕಾಯಿಲೆಗಳಿಗೆ ದಾರಿ. ಹೀಗಾಗಿ ಮನಸ್ಸಿನಲ್ಲಿ ಚಿಂತೆ, ಕಳವಳಕ್ಕೆ ಆಸ್ಪದ ನೀಡದೆ ಶಾಂತ ಸ್ಥಿತಿಯಲ್ಲಿ ಇಟ್ಟುಕೊಳ್ಳುವುದನ್ನು ಕಲಿಯಬೇಕಿದೆ. ಎಲ್ಲ ಮಕ್ಕಳೂ ಒಳ್ಳೆಯವರು ಆದರೆ, ಸನ್ನಿವೇಶ ಅವರನ್ನು ಆತ್ಮಹತ್ಯೆ, ಖಿನ್ನತೆ, ದುಶ್ಚಟಗಳಿಗೆ ಎಳಸುವಂತೆ ಮಾಡುತ್ತವೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಗಿರೀಶ ಪದಕಿ ಮಾತನಾಡಿ, ಉದ್ವೇಗ, ಖಿನ್ನತೆ ಮನಸ್ಸಿಗೆ ಆವರಿಸಿದರೆ ಅದರಿಂದ ಹೊರ ಬರುವುದು ಕಷ್ಟ. ಪಾಲಕರು ಮಕ್ಕಳಿಗೆ ಸರಿಯಾದ ಮಾರ್ಗದರ್ಶನ ನೀಡುವುದು ಮುಖ್ಯವಾಗಿದೆ ಎಂದರು. ಮನೋವೈದ್ಯ ಡಾ. ಆದಿತ್ಯ ಪಾಂಡುರಂಗಿ, ಪ್ರಾಧ್ಯಾಪಕ ಹರ್ಷವರ್ಧನ ಶೀಲವಂತ, ಜೆಎಸ್?ಎಸ್ ಐಟಿಐ ಕಾಲೇಜಿನ ಪ್ರಾಂಶುಪಾಲ ಮಹಾವೀರ ಉಪಾಧ್ಯೆ, ಪಾಲಿಕೆ ಮಾಜಿ ಸದಸ್ಯ ಸಂಜಯ ಕಪಟಕರ, ನಿವೃತ್ತ ನ್ಯಾಯಾಧೀಶ ಪಿ.ಜಿ.ಎಂ. ಪಾಟೀಲ, ಡಾ. ಕವನ ದೇಶಪಾಂಡೆ, ಡಾ. ಗೋಪಿನಾಥ, ಡಾ. ಗೋವಿಂದರೆಡ್ಡಿ ತಮ್ಮ ವೃತ್ತಿ ಅನುಭವ ಹಂಚಿಕೊಂಡರು.

ಅರುಣ ಶೀಲವಂತ, ಸಿಪಿಐ ನಾಯ್ಕರ, ಸಿಪಿಐ ಮಹಾಂತೇಶ ಬಸಾಪುರ, ಡಾ. ಅರುಣ ಕುಲಕರ್ಣಿ, ಗಿರೀಶ ಮುತ್ಸದ್ಧಿ, ಕೃಷ್ಣ ದೇಶಪಾಂಡೆ, ತುಳಜಪ್ಪ, ಕೆ.ಎಸ್. ಜಯಂತ, ಇತರರು ಇದ್ದರು. ಸಾಹಿತಿ ಮಾರ್ತಾಂಡಪ್ಪ ಕತ್ತಿ ಸ್ವಾಗತಿಸಿದರು. ವಿನಾಯಕ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸುನೀಲ ಬಾಗೇವಾಡಿ ವಂದಿಸಿದರು.

# ಆರೋಗ್ಯ ಹಸ್ತ ಕಾರ್ಯಕ್ರಮಕ್ಕೆ ಚಾಲನೆ

ವಿಜಯಪುರ : ಕರೊನಾ ಕುರಿತು ಜನರಲ್ಲಿ ರೋಗದ ಬಗ್ಗೆ ಅರಿವಾಗಿದೆ ಹಾಗೂ ಜನ ಈ ರೋಗದಿಂದ ಭಯಮುಕ್ತರಾಗುತ್ತಿದ್ದು ಚಿಕಿತ್ಸೆಗಾಗಿ ಸ್ಪಂದಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ಅಬ್ದುಲ್ ಹಮೀದ್ ಮುಶ್ರೀಫ್ ಹೇಳಿದರು.ನಗರದ ವಾರ್ಡ್ ನಂ.2ರಲ್ಲಿ ಭಾನುವಾರ ಕಾಂಗ್ರೆಸ್ ವತಿಯಿಂದ ಹಮ್ಮಿಕೊಂಡಿದ್ದ ಆರೋಗ್ಯ ಹಸ್ತ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕಾಂಗ್ರೆಸ್ ವತಿಯಿಂದ ಕೈಗೊಂಡ ಆರೋಗ್ಯ ಹಸ್ತ ಕಾರ್ಯಕ್ರಮದಿಂದ ಜನತೆ ಧೈರ್ಯದಿಂದ ಕರೊನಾವನ್ನು ಎದುರಿಸಿ ತಮ್ಮ ದಿನ ನಿತ್ಯದ ಜೀವನದಲ್ಲಿ ತೊಡಗಿಕೊಂಡು ಆರ್ಥಿಕ ಚೈತನ್ಯ ಕಂಡುಕೊಳ್ಳುತ್ತಿದ್ದು,ಜನರಲ್ಲಿ ನೈತಿಕ ಬಲಬಂದಂತಾಗಿದೆ. ವಿಜಯಪುರ ನಗರದಲ್ಲಿ ಕೋವಿಡ್ ಸೋಂಕು ಹತೋಟಿಗೆ ಬರುತ್ತಿದ್ದು, ಜನರು ನಿಟ್ಟುಸಿರು ಬಿಡುವಂತಾಗಿದೆ. ಆದರೂ ಜನ ಪರಸ್ಪರ ಅಂತರ ಕಾಯ್ದುಕೊಂಡು ಮುಖಕ್ಕೆ ಮಾಸ್ಕ್ ಧರಿಸಿ ರೋಗ ಹರಡದಂತೆ ಜಾಗ್ರತೆ ವಹಿಸಬೇಕಿದೆ ಎಂದು ತಿಳಿಸಿದರು.ಜಿಲ್ಲಾ ಕಾಂಗ್ರೆಸ್ ಕೋವಿಡ್-19 ಜಾಗೃತಿ ಸಮಿತಿ ಅಧ್ಯಕ್ಷ ಮಹ್ಮದ್ ರಫೀಕ್ ಟಪಾಲ್ ಮಾತನಾಡಿ, ಕರೊನಾ ಮಹಾಮಾರಿ ಇಡೀ ಜಗತ್ತಿಗೆ ಒಂದು ಕಂಟಕವಾಗಿದ್ದು,

ಅದನ್ನು ತಡೆಯುವ ನಿಟ್ಟಿನಲ್ಲಿ ಜನತೆ ಸರ್ಕಾರದ ಮಾರ್ಗಸೂಚಿಯನ್ನು ಪಾಲಿಸಬೇಕು. ರೋಗ ಲಕ್ಷಣಗಳು ಕಂಡುಬಂದಲ್ಲಿ ಪರಸ್ಪರ ಅಂತರ ಕಾಯ್ದುಕೊಂಡು ತಕ್ಷಣ ವೈದ್ಯರನ್ನು ಸಂಪರ್ಕಿಸಬೇಕು ಎಂದರು. ಪಾಲಿಕೆ ಮಾಜಿ ಸದಸ್ಯ ಅಬ್ದುಲ್ ರಜಾಕ್ ಹೋರ್ತಿ, ನಗರಸಭೆ ಮಾಜಿ ಸದಸ್ಯ ನಬಿಲಾಲ್ ಕರಜಗಿ, ವಿಜಯಪುರ ನಗರ ಬ್ಲಾಕ್ ಅಧ್ಯಕ್ಷ ಜಮೀರ್ ಅಹ್ಮದ್ ಬಕ್ಷಿ, ಕಾಂಗ್ರೆಸ್ ಮುಖಂಡ ಶರಣಪ್ಪ ಯಕ್ಕುಂಡಿ, ಮುಖಂಡರಾದ ಆರತಿ ಶಹಾಪುರ, ಎಸ್.ಎಸ್.ಜಾಗೀರದಾರ, ವಸಂತ ಹೊನಮೊಡೆ, ಶಬ್ಬೀರ್ ಜಾಗೀರದಾರ ಇತರರು ಭಾಗವಹಿಸಿದ್ದರು.

# ದೇವಸ್ಥಾನ ನಿರ್ಮಾಣಕ್ಕೆ 6 ಲಕ್ಷ ರೂ. ಅರ್ಪಣೆ: ಕಾಮಗಾರಿಗೆ ಗುದ್ದಲಿ ಪೂಜೆ



ಬೆಳಗಾವಿ - ಗ್ರಾಮೀಣ ಕ್ಷೇತ್ರದ ಶಾಸಕಿ ಲಕ್ಷ್ಮಿ ಹೆಬ್ಬಾಳಕರ್ ಅವರು ಕ್ಷೇತ್ರದ ವಿವಿಧ ದೇವಸ್ಥಾನಗಳ ನಿರ್ಮಾಣ ಮತ್ತು ಜೀರ್ಣೋದ್ಧಾರಕ್ಕೆ ತಮ್ಮ ಶಾಸಕರ ನಿಧಿಯಿಂದ ಕೊಡುಗೆಗಳನ್ನು ನೀಡುತ್ತಿದ್ದು, ಭಾನುವಾರ 2 ದೇವಸ್ಥಾನಗಳಿಗೆ ತಲಾ 3 ಲಕ್ಷ ರೂ. ನೀಡಲಾಯಿತು.ಕ್ಷೇತ್ರದ ಕುಕಡೊಳ್ಳಿ ಗ್ರಾಮದ ಎಸ್ ಸಿ ಕಾಲೋನಿಯಲ್ಲಿ ಶ್ರೀ ದುರ್ಗಾದೇವಿ ಮಂದಿರ ನಿರ್ಮಾಣ ಮತ್ತು ಶ್ರೀ ಬೀರದೇವರ ಮಂದಿರ ನಿರ್ಮಾಣಕ್ಕೆ ಚೆಕ್ ಮೂಲಕ ಹಣ ಹಸ್ತಾಂತರಿಸಲಾಯಿತು. ಲಕ್ಷ್ಮಿ ಹೆಬ್ಬಾಳಕರ್ ಅನುಪಸ್ಥಿತಿಯಲ್ಲಿ ಸ್ಥಳೀಯ ಜನಪ್ರತಿನಿಧಿಗಳು ಮತ್ತು ಯುವ ಕಾಂಗ್ರೆಸ್ ಮುಖಂಡ ಚನ್ನರಾಜ ಹಟ್ಟಿಹೊಳಿ ಚೆಕ್ ನ್ನು ದೇವಸ್ಥಾನದ ಆಡಳಿತ ಮಂಡಳಿಗೆ ನೀಡಿದರು.

ನಂತರ ದೇವಸ್ಥಾನಗಳ ಕಾಮಗಾರಿಗಳಿಗೆ ಗುದ್ದಲಿ ಪೂಜೆಯನ್ನು ಸಹ ನೆರವೇರಿಸಿದರು.ದೇವಸ್ಥಾನ ನಿರ್ಮಾಣಕ್ಕೆ ನೆರವು ನೀಡಿದ ಶಾಸಕಿ ಲಕ್ಷ್ಮಿ ಹೆಬ್ಬಾಳಕರ್ ಅವರಿಗೆ ಗ್ರಾಮಸ್ಥರು ಕೃತಜ್ಞತೆ ವ್ಯಕ್ತಪಡಿಸಿದರು. ಗ್ರಾಮಸ್ಥರ ಹಲವು ಕಾಲದ ನಿರೀಕ್ಷೆ ಈಡೇರಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಇದೇ ವೇಳೆ ಚನ್ನರಾಜ ಹಟ್ಟಿಹೊಳಿ ಅವರನ್ನು ದೇವಸ್ಥಾನಗಳ ಸಮಿತಿಯಿಂದ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾಮಸ್ಥರು, ಸಿ ಸಿ ಪಾಟೀಲ, ಸುರೇಶ ಇಟಗಿ, ಗೌಸಮೊದ್ದಿನ ಜಾಲಿಕೊಪ್ಪ, ಈರಣ್ಣ ಪಾಟೀಲ, ಮಂಜುನಾಥ ಹುಬ್ಬಳ್ಳಿ, ಬಸನಗೌಡ ಪಾಟೀಲ, ದೇವಸ್ಥಾನದ ಕಮೀಟಿಯವರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಕುರಿ ಮೇಕೆ ಮಾಂಸ ಹಾಗೂ ಹಾಲು ಉತ್ಪನ್ನವು ಸದಾ ಬೇಡಿಕೆಯ ಉದ್ಯಮ- ಡಾ. ಪ್ರಸನ್ನಕುಮಾರ್




ಬಳ್ಳಾರಿ ಸೆ (ಚಿತ್ರದುರ್ಗ): ಕುರಿಸಾಕಾಣಿಕೆ ಮತ್ತು ಹೈನುಗಾರಿಕೆಯ ಮೂಲಕ ನಿರುದ್ಯೋಗಿಗಳು ಸ್ವಾವಲಂಬನೆ ಜೀವನಸಾಗಿಸಬೇಕು. ಕುರಿ ಮೇಕೆ ಮಾಂಸ ಹಾಗೂ ಹಾಲುಉತ್ಪನ್ನವು ಸದಾ ಬೇಡಿಕೆಯ ಉದ್ಯಮ ಎಂದು ಜಿಲ್ಲಾ ಪಶುಸಂಗೋಪನಾ ಇಲಾಖೆಯ ಉಪನಿರ್ದೇಶಕರಾದ ಡಾ. ಪ್ರಸನ್ನಕುಮಾರ್ ಹೇಳಿದರು. ಚಿತ್ರದುರ್ಗ ನಗರದ ರುಡ್ಸೆಟ್ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಕುರಿ ಮೇಕೆ ಸಾಕಾಣಿಕೆ ಹಾಗೂ ಹೈನುಗಾರಿಕೆ ಮತ್ತು ರಸಗೊಬ್ಬರತಂಯಾರಿಕಾ ಹತ್ತು ದಿನಗಳ ಶಿಬಿರದ ಸಮಾರೋಪಸಮಾರಂಭದಲ್ಲಿ ಮಾತನಾಡಿದರು.ನಿರುದ್ಯೋಗಿ ಯುವಕರನ್ನು ಉದ್ಯೋಗಸ್ಥರನ್ನಾಗಿ ಮಾಡುವುದು ಸಂಸ್ಥೆಯ ಮೂಲಉದ್ದೇಶ. ಈಮೂಲಕ ಕುರಿ ಮತ್ತು ಮೇಕೆ ಸಾಕಾಣಿಕೆ ಹೊಸಕಾಣಿಕೆ ನೀಡಲಿದೆ. ಈಮೂಲಕ ಅಭಿವೃದ್ಧಿ ಸಾಧಿಸಿಎಂದರು.

ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಜಿಲ್ಲಾ ಉಪನಿರ್ದೇಶಕರಾದ ಡಾ. ತಿಪ್ಪೆಸ್ವಾಮಿಮಾತನಾಡಿ, ಬೇಡಿಕೆ ಕುಸಿಯದ ಉದ್ಯಮ ಎಂದರೆ ಅದು ಕುರಿಸಾಕಾಣಿಕೆ ಯಾಗಿದ್ದು, ಕುರಿಸಾಕಣೆಯ ಮೂಲಕ ಆರ್ಥಿಕ ಲಾಭಗಳಿಸಬೇಕು. ಇಂದು ಕೃಷಿ ಮತ್ತು ಪಶುಸಂಗೋಪನೆಹೆಚ್ಚು ಆಧುನಿಕವಾದಪದ್ಧತಿಯಲ್ಲಿ ಬಳಸಲಾಗುತ್ತಿದೆ ಅದನ್ನು ಬಳಸಿಕೊಂಡು ನೀವೂಉದ್ಯಮಿಗಳಾಗಿ ಎಂದರು.

ಉಪನ್ಯಾಸಕರಾದ ರಾಯಚೂರು ಬಸವರಾ?? ?ವರು ಮಾತನಾಡಿ ದೇಶದಲ್ಲಿ ಶೇ70ರಷ್ಟು ಜನರು ಪಶುಗಳ ಮೇಲೆ ಅವಲಂಬಿತರಾಗಿದ್ದಾರೆ. ಯಾವುದೇ ಉದ್ಯಮವಾದರೂ ಸೋಲಬಹುದು ಕೃಷಿಯನ್ನು ಪಶುಸಂಗೋಪನೆಯನ್ನು ಆಧುನಿಕವಾದ ಯೋಜನೆಗಳ ಮೂಲಕ ಬಳಸಿದರೆಸೋಲಿಲ್ಲ. ತರಬೇತಿಯಲ್ಲಿ ಮನಸು ಕೊಟ್ಟು ಕಲಿತವರು ನಿರುದ್ಯೋಗ ದೂರಮಾಡಿ ಎಂದರು.ರುಡ್ಸೆಟ್ಸಂಸ್ಥೆ ನಿರ್ದೇಶಕಿ ಮಂಜುಳ ಮಾತನಾಡಿ, ನಿರುದ್ಯೋಗಿಗಳು ಇಂದು ಇನ್ನೊಬ್ಬರಮೇಲೆ ಅವಲಂಭಿತರಾಗದೆ ಸ್ವಉದ್ಯೋಗಮಾಡಿ. ವೀರೇಂದ್ರ ಹೆಗ್ಗಡೆ ಅವರ ಆಶಯದಂತೆ ಅಭಿವೃದ್ಧಿ ಸಾಧಿಸಿ ಎಂದರು. ಜತೆಗೆ ಮಾನವೀಯತೆಯಿಂದ ರೂಡಿಸಿಕೊಳ್ಳಿ ನೀವೂಬೆಳೆಯಿರಿ. ಇನ್ನೊಬ್ಬರನ್ನು ಬೆಳೆಸಿಎಂದರು.ಇದೇ ಸಂದರ್ಭದಲ್ಲಿ ತರಬೇತಿ ಪಡೆದ ದೊರೆ ರಾಜು, ಯತೀಶ್, ಆಕಾಶ್, ಶ್ರೀನಿವಾಸ್ , ಧನಂಜಯ, ಮಾಲತೇ ?ರಸ್ ಮಾತನಾಡಿದರು.ರುಡ್ಸಂಸ್ಥೆಯ ಹಿರಿಯ ಉಪನ್ಯಾಸಕಿ ಲತಾ ಹಾಗೂ ತೋಟಪ್ಪ ಇದ್ದರು. ಕಾಂಚನಾರಂಗಪ್ಪ ಪ್ರಾರ್ಥಿಸಿದರು.

# ಕ್ಷೇತ್ರದಲ್ಲಿ ಬಾಕಿ ಉಳಿದ ಕೆಲಸಗಳು ಶೀಘ್ರ ಪೂರ್ಣ



ಯರಗಟ್ಟಿ: ಕರೊನಾದಿಂದ ಸರ್ಕಾರಕ್ಕೆ ಹಣಕಾಸಿನ ಮುಗ್ಗಟ್ಟು ಎದುರಾಗಿದ್ದು, ಅಭಿವೃದ್ಧಿ ಕಾಮಗಾರಿ ಕುಂಠಿತವಾಗಿವೆ. ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ ಸೇರಿ ಇತರ ಅಭಿವೃದ್ಧಿ ಕೆಲಸಗಳು ಬಾಕಿ ಉಳಿದಿವೆ. ಮುಂಬರುವ ದಿನಗಳಲ್ಲಿ ಪೂರ್ಣಗೊಳಿಸಲಾಗುವುದು ಎಂದು ವಿಧಾನಸಭಾ ಉಪಸಭಾಧ್ಯಕ್ಷ ಆನಂದ ಮಾಮನಿ ಹೇಳಿದರು.ಸಮೀಪದ ಮುಗಳಿಹಾಳ ಗ್ರಾಮದ ಕೃಷಿ ಪತ್ತಿನ ಸಂಘದಲ್ಲಿ ಶನಿವಾರ ರೈತರಿಗೆ ಟ್ರ್ಯಾಕ್ಟರ್ ವಿತರಣೆ ಸಮಾರಂಭದಲ್ಲಿ ಮಾತನಾಡಿದ ಅವರು, ಜಿಲ್ಲಾ ಸಹಕಾರಿ ಬ್ಯಾಂಕ್‌ನ ಮೂಲಕ ಕಡಿಮೆ ಬಡ್ಡಿ ಸಾಲ ಒದಗಿಸಿ ತಾಲೂಕಿನ ಹಲವು ರೈತರಿಗೆ ಟ್ರ್ಯಾಕ್ಟರ್‌ವಿತರಿಸಲಾಗಿದೆ.ರೈತರು ಸದುಪಯೋಗ ಪಡೆದುಕೊಂಡು ಕೃಷಿ ಜತೆಗೆ ಆರ್ಥಿಕವಾಗಿಯೂ ಸದೃಢವಾಗಬೇಕು ಎಂದರು.ಮುಗಳಿಹಾಳದಲ್ಲಿ ಈ 3 ಸೇರಿ ಒಟ್ಟು 8 ಟ್ರ್ಯಾಕ್ಟರ್ ವಿತರಿಸಲಾಗಿದೆ. ಇಲ್ಲಿನ ರೈತ ಸಮುದಾಯಕ್ಕೆ 5 ಕೋಟಿ ರೂ. ಶೂನ್ಯ ಬಡ್ಡಿ ದರದ ಸಾಲ ನೀಡಲಾಗಿದೆ ಎಂದರು.

ಜಿಪಂ ಸದಸ್ಯ ಅಜಿತಕುಮಾರ ದೇಸಾಯಿ, ಪಿಕೆಪಿಎಸ್ ಅಧ್ಯಕ್ಷ ಚನ್ನಪ್ಪ ದಳವಾಯಿ, ಬ್ಯಾಂಕ್ ನರೀಕ್ಷಕ ಎಸ್.ಎಸ್. ಗೋಣಿ, ನಾಗಪ್ಪ ಪುಂಜಿ, ಶಂಕರ ಇಟ್ನಾಳ, ಎನ್.ಕೆ.ಬಡಿಗೇರ, ಬಸಪ್ಪ ಪಾಟೀಲ, ಕರೆಪ್ಪ ಕಲಗೋಡ, ಭೀಮಶೆಪ್ಪ ಕಲ್ಲಕುಟ್ರಿ, ಬಸಪ್ಪ ಬೆಲ್ಲದ, ಸಂಗಪ್ಪ ಬೆಲ್ಲದ, ಪಿಕೆಪಿಎಸ್ ನರ್ದೇಶಕರು, ಗ್ರಾಮಸ್ಥರು ಇತರರು ಇದ್ದರು.

# ದೇಗುಲದಲ್ಲಿ ಭಕ್ತರಿಗೆ ಸಕಲ ಸೌಲಭ್ಯ :ಆನಂದ ಗುರುಸ್ವಾಮಿ



ಹುಬ್ಬಳ್ಳಿ: ಪ್ರಸಕ್ತ ವರ್ಷ ಕರೊನಾ ಕಾರಣದಿಂದ ಶಬರಿಮಲೈ ಅಯ್ಯಪ್ಪಸ್ವಾಮಿ ದರ್ಶನ ಯಾತ್ರಿಕರಿಗೆ ಕಷ್ಟ ಸಾಧ್ಯವಾದ ಹಿನ್ನೆಲೆಯಲ್ಲಿ ಶಿರೂರ ಪಾರ್ಕ್ ತದ್ರೂಪಿ ಅಯ್ಯಪ್ಪಸ್ವಾಮಿ ದರ್ಶನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು, ಮಾಲಾಧಾರಿಗಳು ಬರುವ ಸಾಧ್ಯತೆ ಇದೆ. ಮಾಲಾಧಾರಿಗಳು ಹಾಗೂ ದರ್ಶನಾರ್ಥಿಗಳಿಗೆ ಎಲ್ಲ ರೀತಿಯ ಸೌಲಭ್ಯ ಕಲ್ಪಿಸಲಾಗು ವುದು ಎಂದು ಶಿರೂರ ಪಾರ್ಕ್ ಅಯ್ಯಪ್ಪಸ್ವಾಮಿ ದೇವಸ್ಥಾ ನದ ಧರ್ಮದರ್ಶಿ ಆನಂದ ಗುರುಸ್ವಾಮಿ ಹೇಳಿದರು.ಇಲ್ಲಿನ ಶಿರೂರ ಪಾರ್ಕ್ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಶನಿವಾರ ಕರೆಯಲಾಗಿದ್ದ ಶ್ರೀ ಅಯ್ಯಪ್ಪ ಭಕ್ತ ವೃಂದ ಟ್ರಸ್ಟ್?ನ 2019-20ನೇ ಸಾಲಿನ ಸರ್ವ ಸಾಧಾರಣ ಸಭೆ ಉದ್ಘಾಟಿಸಿ ಅವರು ಮಾತನಾಡಿದರು. ಈ ಅಯ್ಯಪ್ಪಸ್ವಾಮಿ ದೇಗುಲದ ಸ್ಥಾಪನೆಯ ಹಿನ್ನೆಲೆ ಹಾಗೂ ಕೈಗೊಂಡ ಸುಧಾರಣೆ ಕ್ರಮಗಳನ್ನು ಪ್ರಾಸ್ತಾವಿಕವಾಗಿ ವಿವರಿಸಿದ ಅವರು, ಅಯ್ಯಪ್ಪ ಗುಡಿ ಅಭಿವೃದ್ಧಿಗೆ ಡಾ. ವಿಜಯ ಸಂಕೇಶ್ವರ ಹಾಗೂ ಆನಂದ ಸಂಕೇಶ್ವರ ಅವರ ಕೊಡುಗೆ, ದಾನ, ಧರ್ಮವನ್ನು ಸ್ಮರಿಸಿದರು.ಭಕ್ತ ವೃಂದ ಟ್ರಸ್ಟ್ ಹಾಗೂ ಸೇವಾ ಸಮಿತಿಯ ಸದಸ್ಯರ ಸಹಕಾರಕ್ಕೆ ಆನಂದ ಗುರುಸ್ವಾಮಿ ಮೆಚ್ಚುಗೆ ವ್ಯಕ್ತಪಡಿಸಿದರು.ಅಯ್ಯಪ್ಪ ಭಕ್ತ ವೃಂದ ಟ್ರಸ್ಟ್ ಅಧ್ಯಕ್ಷ ಆನಂದ ಸಂಕೇಶ್ವರ ಮಾತನಾಡಿ ,ಕರೊನಾ ಹಿನ್ನೆಲೆಯಲ್ಲಿ ಈ ಸಾಲಿನ ಮಾಲಾಧಾ ರಿಗಳಿಗೆ ಹಾಗೂ ಭಕ್ತರಿಗೆ ಎಲ್ಲ ರೀತಿಯ ಸುರಕ್ಷತಾ ಕ್ರಮ ಕೈಗೊಳ್ಳಲಾ ಗುವುದು. ಮುಂದೂಡಲ್ಪಟ್ಟಿದ್ದ ದೇಗುಲದ ವಾರ್ಷಿಕೋತ್ಸವ ವನ್ನು ಅಕ್ಟೋಬರ್ 17ರಂದು ಆಚರಿಸಲಾ ಗುವುದು.ಈ ದಿಸೆಯಲ್ಲಿ ಯಾತ್ರಿಗಳು ಹಾಗೂ ಅಯ್ಯಪ್ಪ ಭಕ್ತರು ನೀಡು ತ್ತಿರುವ ಸಹಕಾರ, ಬೆಂಬಲ ಸ್ಮರಣೀಯ ಎಂದರು.ಟ್ರಸ್ಟ್ ಉಪಾಧ್ಯಕ್ಷ ಡಾ. ವಿಎಸ್‌ವಿ ಪ್ರಸಾದ ಮಾತನಾಡಿ, ದೇವಸ್ಥಾನದಲ್ಲಿ ಈವರೆಗೆ ಕೈಗೊಂಡ ಅಭಿವೃದ್ಧಿ ಕಾರ್ಯ ಹಾಗೂ ಈ ವರ್ಷ ಕೈಗೊಳ್ಳುತ್ತಿರುವ ಚಟುವಟಿಕೆಗಳನ್ನು ವಿವರಿಸಿದರು.ಟ್ರಸ್ಟ್ ಕಾರ್ಯದರ್ಶಿ ಜಯರಾಮ ಶೆಟ್ಟಿ ಅವರು ಕಳೆದ ಸಾಲಿನ ಸರ್ವ ಸಾಧಾರಣ ಸಭೆಯ ನಡಾವಳಿ ವಾಚಿಸಿದರು. ಖಜಾಂಚಿ ಜಿ.ಎಸ್. ಅಯ್ಯರ್,2019-20ನೇ ಸಾಲಿನ ವಾರ್ಷಿಕ ಅಢಾವೆ ಪತ್ರಿಕೆ ಮಂಡಿಸಿದರು. ಡಾ. ಸಮೀರಾಚಾರ್ಯ ಕಂಠಪಲ್ಲೀ ಶುಭ ಹಾರೈಸಿದರು. ಸೇವಾ ಸಮಿತಿ ಪರವಾಗಿ ಸಂಜೀವ ಸುಗತೆ ಮಾತನಾಡಿದರು. ಟ್ರಸ್ಟ್?ನ ಎಲ್ಲ ಧರ್ಮ ದರ್ಶಿಗಳು, ಸೇವಾ ಸಮಿತಿ ಸದಸ್ಯರು ಉಪಸ್ಥಿತರಿದ್ದರು. ಪ್ರದೀಪ ಶೆಟ್ಟಿ ಪ್ರಾರ್ಥನೆ ಹಾಡಿದರು.ಪ್ರಕಾಶ ರಾಯ್ಕರ ಸ್ವಾಗತಿಸಿ,ಕಾರ್ಯಕ್ರಮ ನರೂಪಿಸಿ ದರು. ಡಾ. ಸಮೀರಾಚಾರ್ಯ ಕಂಠಪಲ್ಲೀ ಶುಭ ಹಾರೈಸಿದರು.ಸೇವಾ ಸಮಿತಿ ಪರವಾಗಿ ಸಂಜೀವ ಸುಗತೆ ಮಾತನಾಡಿ ದರು. ಟ್ರಸ್ಟ್?ನ ಎಲ್ಲ ಧರ್ಮದರ್ಶಿಗಳು, ಸೇವಾ ಸಮಿತಿ ಸದಸ್ಯರು ಉಪಸ್ಥಿತರಿದ್ದರು. ಪ್ರದೀಪ ಶೆಟ್ಟಿ ಪ್ರಾರ್ಥನೆ ಹಾಡಿದರು. ಪ್ರಕಾಶ ರಾಯ್ಕರ ಸ್ವಾಗತಿಸಿ, ಕಾರ್ಯಕ್ರಮ ನರೂಪಿಸಿದರು.

# ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಯ ವಿದ್ಯಾರ್ಥಿಗಳ ವಿವರ

ಗದಗ-: ಜಿಲ್ಲೆಯಲ್ಲಿ ಸೆ.14 ರಂದು ಜರುಗಿದ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಯ ವ್ಯವಹಾರ ಅಧ್ಯಯನ, ಶಿಕ್ಷಣ ಹಾಗೂ ರಾಸಾಯನಶಾಸ್ತ್ರ ವಿಷಯದಲ್ಲಿ 1183 ವಿದ್ಯಾರ್ಥಿಗಳು ನೋಂದಾಯಿಸಿದ್ದಾರೆ. ಅದರಲ್ಲಿ 1097 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 86 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಜಯ್ಯಪ್ಪ ಸಿ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.